Doc-299
T.P-2

(1)

51st Year of Publication ★ SATYAVADI Daily, MYSORE 4

Reg No B G 155

11 - 5 - 1968

ಸತ್ಯವಾದಿ

ಸ್ಥಾಪಕರು : ಅನಂತಶಯನಂ ಅಯ್ಯಂಗಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಸಮಸ್ತ ಸರ್ಕಾರಿ ಆಜ್ಞೆಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ

ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೆವೆಚ್ಚ ಸೇರಿ ವರ್ಷಕ್ಕೆ ರೂ 10-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 2

Space available

For Permanent Advertisement

ಕೋರ್ಟು ಭಾಷೆಯು ಇಂಗ್ಲೀಷಿನಲ್ಲಿರುವುದು

ಮೈಸೂರು ಅಶೋಕಾ ಟಾಕೀಸ್ ಬಳಿ ಹಾಕಿರುವ ತಮ್ಮ ಸ್ವಂತ ಭವ್ಯ
ಥಿಯೇಟರಿನಲ್ಲಿ ಪ್ರತಿ ದಿನ ಸಂಜೆ 6-30 ರಿಂದ 12-30 ರ ವರಿಗೆ

ವಿವಿಧ ವಿನೋದ Pastime & sports

ಸುಪ್ರಸಿದ್ಧ ನರ್ತಕಿಯರಿಂದ ವಿವಿಧ ತರದನೃತ್ಯಗಳು, ಹೈದರಾಬಾದಿನ ಸುಪ್ರಸಿದ್ಧ ಜಾದುಗಾರ ಶ್ರೀ ಎಲ್. ಎ. ಬಾಬು ಇವರಿಂದ ಅದ್ಭುತಪೂರ್ಣವಾದ ಇಂದ್ರಜಾಲಾಟ ನಕ್ಕುನ್ನು ಮಾತನಾಡುವ ಬೊಂಬೆ, ಎಲೆಕ್ಟ್ರಿಕ್ ಕುರ್ಚಿ. ಪ್ರವೇಶದರ 25 ಪೈಸೆ

"ಸತ್ಯವಾದಿ" ಯ ಸ್ವರ್ಣೋತ್ಸವ

"ಸತ್ಯವಾದಿ" ಯ ಸ್ವರ್ಣೋತ್ಸವವನ್ನು ಕ್ಷೇಪ್ರದಲ್ಲೇ ಸಂಘಟಿಸಲಾಗುವುದು.

ವಿಶ್ವವಿದ್ಯಾಧ್ಯಕ್ಷರು, ಪ್ರಧಾನಿಯವರು, ಶ್ರೀಮನ್ಮಹಾರಾಜರು, ಮತ್ತಿತರ ಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಂತೆಯೇ ಇಲ್ಲ.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನನೆರವನ್ನೂ ಆದರ ನಿರ್ವಾಜ್ಯಗಳಿಂದ ನೀಡಿ ಸಹಕರಿಸಬೇಕಾಗಿ ಪ್ರಾರ್ಥಿಸಿ, ಈಡೇರುವೆವೆಂದು ಆಶಿಸಿ, ಕೃತಜ್ಞತಾಪೂರ್ವವಂದಿಸುತ್ತೇವೆ.

ಸಂಪಾದಕ 'ಸತ್ಯವಾದಿ'
ಚಾಮರಾಜಪುರಂ, ಮೈಸೂರು 4.

● ಈ ಸಾರಿ ಸ್ಪರ್ಧಿಸಲಿರುವ ಐನರಲ್ಲಿ ರಾಬರ್ಟ್ ಕೆನಡಿ (ಮಾಜಿ ಅಧ್ಯಕ್ಷರ ಸಹೋದರರು) 18,000000 ಡಾಲರು (ರೂ. 13.5) ಖರ್ಚುಮಾಡುವರೆಂದು ಕಲವರ ಅಂದಾಜು – ಇತರ ಉಮೇದುವಾರರುಗಳ ಖರ್ಚು ಸೇರಿ ಈ ಸಾರಿಯ ಚುನಾವಣೆ ಖರ್ಚು 50 ಮಿಲಿಯ ಡಾಲರುಗಳಿಗೆ ಕಡಮೆಯಾಗಲಾರದೆಂದು ಹೇಳಲಾಗಿದೆ.

ಕೂದಲಿನ ಕುಲ್ಯಾ ತಯಾರಿಕೆ

ಮದರಾಸಿನ ಒಂದು ಕುಲಾಯಿ ಕಾರ್ಖಾನೆಯು ಮೈಸೂರು ಜಿಲ್ಲೆಯ ನುಹ ದೇಶ್ವರ ಬೆಟ್ಟದ ದೇವಾಲಯದಲ್ಲಿ ಹರಕೆ ಯೊಪ್ಪಿಸುವ ತಲೆಗೂದಲನ್ನು ಪಡೆದು, ಕುಲಾಯಿಗಳನ್ನು ತಯಾರಿಸುವ ಸಲುವಾಗಿ ಒಂದು ಕುಲಾಯಿ ಕಾರ್ಖಾನೆ ಸ್ಥಾಪಿಸಲು ಕೇಳಿಕೊಂಡಿತ್ತು : ಸರಕಾರವು ಆ ಕಾರ್ಖಾನೆಗೆ ಅನುಮತಿ ಇತ್ತಿದೆ ಮತ್ತು ಕಾರ್ಖಾನೆಗೆ ಸ್ಥಳಕೊಡಲು ಒಪ್ಪಿದೆ – ವರ್ಷಕ್ಕೆ ಇಂಥ ಕೂದಲು ನಾಲ್ಕು ಟನ್‌ಗಳಷ್ಟು ಸಂಗ್ರಹವಾಗುತ್ತದೆ.

★

ಹಾವಿನ ತೊಗಲು

ಬ್ರಿಟ್, ಅಮೇರಿಕಾ ಮೊದಲಾದ ದೇಶಗಳಲ್ಲಿ, ಫೇರ್ಷ ಪೋಷಾಕು ತಯಾರಿಸುವವರು, ಹಾವಿನ ತೊಗಲಿನ ಪೋಷಾಕುಗಳನ್ನೂ ಕೈಚೀಲಗಳನ್ನೂ ಹ್ಯಾಟ್‌ಗಳನ್ನೂ ಪಾದರಕ್ಷೆಗಳನ್ನೂ ವರ್ಷೇವರ್ಷೆ ನವೀನ ಮಾದರಿಗಳಲ್ಲಿ ತಯಾರಿಸಿ ಅಲ್ಲಿಯ ವಿಲಾಸ ಸ್ತ್ರೀಯರುಗೊಪ್ಪಿಸುತ್ತಾರೆ. ಭಾರತದಿಂದ ಈ ದೇಶಗಳಿಗೆ ಹೇರಳವಾಗಿ ಹಾವುಗಳ ತೊಗಲು ರಫ್ತಾಗುತ್ತಿದೆ. 67–68 ನೇ ವರ್ಷದ ಮೊದಲು 10 ತಿಂಗಳಲ್ಲಿ ರಫ್ತು ಮೂರು ಕೋಟಿಗೂ ಮಿಕ್ಕಿದೆ. ಶೇ 10 ನಿಷ್ಪ ರಫ್ತಿನ ಮೇಲಿದ್ದ ಸುಂಕವನ್ನು 25 ಕ್ಕೆ ಭಾರತ ಸರಕಾರ ಹೆಚ್ಚಿಸಿದೆ. (ಪ್ರ)

— ದಕ್ಷಿಣದಲ್ಲಿ ಪಾರ್ಲಿಮೆಂಟು

ನವದೆಹಲಿ— ದಕ್ಷಿಣದಲ್ಲಿ ಪಾರ್ಲಿಮೆಂಟು ನಡೆಸುವ ವಿಷಯ ಪರ್ಯಾಲೋಚಿಸಲು 18 ಮಂದಿ ಪಾರ್ಲಿಮೆಂಟು ಸದಸ್ಯರ ಸಮಿತಿ ನೇಮಿಸಲಾಗುವುದೆಂದು ರಾಜ್ಯ ಸಭೆಯಲ್ಲಿ ತಿಳಿಸಲಾಯಿತು.

★

ಜಡ್ಜರ ಸಂಬಳ

ನವದೆಹಲಿ— ಹೈಕೋರ್ಟು ಜಡ್ಜರ ಸಂಬಳ ವತ್ತನುಗೊಳಿಸುವ ಮತ್ತಿತರ ಸೌಲಭ್ಯ ವಿಷಯವನ್ನು ಪರ್ಯಾಲೋಚಿಸಲಾಗುತ್ತಿರುವುದಾಗಿ ರಾಜ್ಯಸಭೆಯಲ್ಲಿ ತಿಳಿಸಲಾಯಿತು.

●

ಪೌರ ಚುನಾವಣೆ

ಲಂಡನ್— ಪೌರಾಡಳಿತದಲ್ಲಿ 30 ವರ್ಷಗಳಿಂದ ಮೆಕೆಯುತ್ತಿದ್ದ ಲೇಬರ್ ಪಾರ್ಟಿಯು ಈಗಿನ ಚುನಾವಣೆಗಳಲ್ಲಿ ಸೋಲುತ್ತಾ, ಕನ್ಸರ್ವೆಟಿವರ ಕೈ ಮೇಲಾಗಿದೆ.

★

ಅಗ್ನಿ ಪ್ರಕರಣಗಳು

ಮದರಾಸು— ಮೊನ್ನೆ ಮತ್ತು ನಿನ್ನೆ 14 ಅಗ್ನಿ ಅನಾಹುತಗಳು ಸಂಭವಿಸಿದವು.

★

ಗಿರಿ ನುಡಿ

ತಾಸನ ಸಭೆ ಸ್ಪೀಕರರು ತಾಜ್ಯಾಂಗದ ಕುರಿತು ನಿರ್ಧಾರ ಕೊಡುವುದಾಗಲೀ, ನ್ಯಾಯಾಂಗ ಪ್ರಶ್ನೆಗಳನ್ನು ಕುರಿತು ತೀರ್ಮಾನಿಸುವುದಾಗಲಿ ಕೂಡದೆಂದು ಭಾರತ ಉಪರಾಷ್ಟ್ರಪತಿ ಶ್ರೀ ವಿ ವಿ ಗಿರಿ ಹೇಳಿದರು.

★

ಬೀದರ್— ಹೆಚ್ಚು ಪಟಾಸು ದಾಸ್ತಾನಿದ್ದ ಅಂಗಡಿಯಲ್ಲಿ ಸ್ಫೋಟವಾಗಿ 3 ಅಂಗಡಿಗಳು ಸುಟ್ಟುಹೋಗಿ, 4 ಮಂದಿ ಗಾಯಗೊಂಡರು.

ಕೋರ್ಟು ಭಾಷೆ

ನವದೆಹಲಿ— ಕೋರ್ಟು ಭಾಷೆಯು ಇಂಗ್ಲೀಷಿನಿಂದ ಹಿಂದಿಗೆ ಬದಲಾವಣೆಗೊಳ್ಳುವ ಸ್ಥಿತಿ ಬಂದಿಲ್ಲವೆಂದು ಲೋಕಸಭೆಯಲ್ಲಿ ತಿಳಿಸಲಾಯಿತು.

★

ಚೀಣೀ ಚಟುವಟಿಕೆ

ಗಾಂಗಟಾಕ್— ಸಿಕಿಂ ಗಡಿಯಲ್ಲಿ ಚುಂಬೀ ತಗ್ಗು ಪ್ರದೇಶದಲ್ಲಿ 1 ವಾರದಿಂದ ಚೀನಿ ಚಟುವಟಿಕೆ ಕಂಡುಬಂದಿದೆ – ಭಾರತ ಸೈನ್ಯವು ಎಚ್ಚರಿಕೆಗೊಳಿಸಲ್ಪಟ್ಟಿದೆ.

★

ವರ್ಗಾವಣೆ ರದ್ದು

ಮೈಸೂರು ನಗರದ ಸಬ್ ಇನ್ಸ್‌ಪೆಕ್ಟರುಗಳಲ್ಲಿ ಶಾಂತಿ ಪಾಲನೆ, ಕರ್ತವ್ಯ ನಿಷ್ಠೆಯಲ್ಲಿ ಪ್ರಥಮ ಬಹುಮಾನಗಳಿಸಿದವರೂ, ಉತ್ತಮ ಸಬ್ ಇನ್ಸ್‌ಪೆಕ್ಟರ್ ಎಂಬ ಪ್ರಶಸ್ತಿ ಗಳಿಸಿದವರೂ, ಅಪರಾಧ ನಿರೋಧದ ಸಪ್ತಾಹದಲ್ಲಿ ಅತ್ಯುತ್ತಮ ಕೆಲಸ ಮಾಡಿ ಹೆಸರು ಗಳಿಸಿರುವ ಮಂಡಿ ಸ್ಟೇಷನ್ನಿನ ಸಬ್ ಇನ್ಸ್‌ಪೆಕ್ಟರ್‌ರವರಾದ ಶ್ರೀ ಸುಂದರ್ ಇವರಿಗೆ ಇಲ್ಲಿಂದ ವರ್ಗವಾದುದನ್ನು ತಿಳಿದು ಪುನರೊಂದ ಮಂಡಿಮೊಹಲ್ಲದ ನಿವಾಸಿಗಳು ಸಂಬಂಧಪಟ್ಟ ಅಧಿಕಾರಿಗಳಲ್ಲಿಗೆ ನಿಯೋಗ ಹೋಗಿ ಶ್ರೀ ಸುಂದರ್ ರವರಂಥಾ ದಕ್ಷ ಸಬ್ ಇನ್ಸ್‌ಪೆಕ್ಟರ್‌ರವರು ಮಂಡಿ ಸ್ಟೇಷನ್‌ನಲ್ಲೇ ಮುಂದುವರಿಯಬೇಕೆಂಬ ಆಗ್ರಹದ ಮೇರೆಗೆ ಜನಪ್ರಿಯರು ಉತ್ತಮ ಶಾಂತಿ ಪಾಲಕರೂ ಆದ ಅವರನ್ನು ಪುನಃ ಮಂಡಿಸ್ಟೇಷನ್ನಿನಲ್ಲೇ ಮುಂದುವರಿಯಲು ಅಧಿಕಾರಿಗಳು ಅಪ್ಪಣೆ ಕೊಡಿಸಿರುವುದಾಗಿ ವರದಿ ಆಗಿದೆ. ಇದರಿಂದ ಮಂಡಿಮೊಹಲ್ಲಾ ನಿವಾಸಿಗಳಿಗೆ ತುಂಬಾ ಸಂತೋಷವಾಗಿದೆ ಎಂದು ಹೇಳಲಾಗಿದೆ.

ಸಂಸತ್‌ಸದಸ್ಯರ ವೇತನ ಇತ್ಯಾದಿಗಳ ಪರಿಶೀಲನೆಗೆ ಎರಡು ಸಭೆಗಳ ಸಮಿತಿ ರಚನೆಗೆ ರಾಜ್ಯ ಸಭೆ ಒಪ್ಪಿತು.

ಚಲಚ್ಚಿತ್ರ ವಾರ್ತೆಗಳು

ಬೊಂಬಾಯಿನಲ್ಲಿ ಫಿಲಂ ಸೇನಾ ಕಾರ್ಯ ಮತ್ತು ಕಾರ್ಯೋಚರಣ ಸಮಿತಿ ಸಾಹಸದಿಂದ ಆದ ಚಲಚ್ಚಿತ್ರ ಸಂಸಾರದ ತ್ರಿಮೂರ್ತಿಗಳ ಒಪ್ಪಂದವು ಪ್ರಶಂಸಿಸಲಾಗಿದೆ.

ಕಲ್ಕತ್ತಾದ ಪೂರ್ಣಿಮಾ ಪಿಕ್ಚರ್ಸ್‌ಗೆ " ಗೂಪಿ ಗಿನೆ ಬಾಬ ಘಿನೆ " ಚಿತ್ರಕ್ಕೆ ಫಿಲಂ ಫೈನಾನ್ಸ್ ಕಾರ್ಪೊರೇಷ ರೂ. 3·5 ಲಕ್ಷ ಸಾಲಾ ಕೊಟ್ಟಿದೆ.

ಸಿನಿಮಾಗಳಲ್ಲಿ ಮದರಂಜನ ತೆರಿಗೆ ಮತ್ತು ಸಿನಿಮಾಗಳ ಮೇಲೆ ಸರ್‌ಚಾರ್ಜಿನ ನ್ಯಾಯತೆಯನ್ನು ಸವಕಲುಮಾಡಿ ಮದರಾಸು ಹೈಕೋರ್ಟಿನಲ್ಲಿ ರಿಟ್ ಅರ್ಜಿ ಹಾಕಲಾಗಿದ್ದು ಅದು ಅಡ್ಮಿಟ್ ಆಗಿದೆ.

ವಿದೇಶದ ಗೂಢಚರ್ಯ ಮತ್ತು ಲೈಂಗಿಕ ಚಿತ್ರಗಳನ್ನು ಸರಕಾರ ಪ್ರತಿಂಧಿಸಬೇಕೆಂದು ಶ್ರೀ ಎ. ವಿ. ಮೇಯಪ್ಪನವರೂ ನುತ್ತಿಬ್ಬರೂ ಹೇರುವರು.

ಸಿನಿಮಾದಲ್ಲಿನ ಮನರಂಜನೆ ತೆರಿಗೆಯು ಅಖಿಲ ಭಾರತ ಸಮಸ್ಯೆಯಾಗಿದೆ : ವಿಶ್ವದ ಯಾವ ದೇಶದಲ್ಲೂ ಇಷ್ಟು ಹೆಚ್ಚು ತೆರಿಗೆ ಇಲ್ಲ, ಮತ್ತು ಅನೇಕ ದೇಶಗಳಲ್ಲಿ ಇದು ಪೂರ್ತಿ ವಜಾ ಆಗಿದೆ ಎಂದು ಶ್ರೀ ಎ ವಿ ಮೇಯಪ್ಪನವರು ಹೇಳಿದ್ದಾರೆ.

ಮದರಾಸಿನ ಸ್ಟೂಡಿಯೋವಲ್ಲಿನ ಕೂಲಿಯು ರೂ. 100 – 110 ಸಂಬಳ ಪಡೆಯುವನೆಂದು ಹೇಳಲಾಗಿದೆ.

ಚಿತ್ರ ತಯಾರಿಕೆಯಲ್ಲಿ ಖರ್ಚು ಹೆಚ್ಚಿ, ನಿರ್ಮಾಪಕರು ದಿವಾಳಿಯಾಗುತ್ತಿರುವರೆಂದು ಶ್ರೀ ಬಾಬುರಾವ್ ಪಟೇಲ್ ಹೇಳಿರುವರು.

ಫಿಲಂ ಕೈಗಾರಿಕೆಯಲ್ಲಿನ ಕರಾಳ ಹಣವನ್ನು ಹೇಗೆ ಸರಕಾರ ಹತೋಟಿಯಲ್ಲಿ ಡಬಲ್ಲದೆಂದು ಶ್ರೀ ಎ ವಿ ಪಟೇಲರು ಹೇಳಿದರು. — Journal of Film Industry

Cow Slaughter should be banned Immediately

SHAKTI

SUDHA

A Superb Tonic

Protect the Cow

ಗೋರಕ್ಷಣೆ ಮಾಡಿ, ಪ್ರಾಣಿದಯಾ ಕಾರ್ಯಗಳು ಹೆಚ್ಚಾಗಿ ನಡೆಯಲಿ

ಶ್ರೀಮದ್ವಾರಾ ಜಗದ್ಗುರು ಮಹಾಸನ್ನಿಧಿಗಳವರು ಶ್ರೀ ಶೃಂಗೇರಿ ಜಗದ್ಗುರು ಮಹಾ ಸ್ವಾಮಿಗಳವರು ಆಶೀರ್ವಾದ ಅನುಗ್ರಹ ಪಡೆದಿರುತ್ತದೆ

ಕನ್ನಡಿಗರಿಲ್ಲಿ ಗೋರಕ್ಷಣೆ ಪ್ರಾಣಿದಯೆ, ಕಾರ್ಯಕರ್ತರು, ಪಶುವೈದ್ಯ

ವಿಜಯ ರಾಗಿ ಏಕೈಕ ವ್ಯಕ್ತಿಯಾಗಿ ಮಾಡುವಕೆಲಸ ; ಪಕ್ಷವಿಲ್ಲ ಜಿಂದು ಸಹ ಸೈನಿಕ

Quality Printing — Neat Binding

Lakshminarasimha Press

Sivarampet, Mysore

ವುಡ್‌ಲಾಂಡ್ಸ್ 3–5–68 ರಿಂದ

ಅಮೋಘ ಆರಂಭ

.... ಸುಬೋಧ್ ಮುಖರ್ಜಿಯವರ ಈಸ್ಟ್‌ಮ್ಯಾನ್ ಕಲರ್ ಹಿಂದಿ ಚಿತ್ರ ....

ಷಾಗಿರ್ದ್ Shagird

ತಾರಾಗಣ— ಜಾಯ್ ಮುಖರ್ಜಿ, ಸೈರಾಬಾನು, ನಾಜಿರ್ ಹುಸೇನ್
ಅಚ್ಚಲ ಸಹದೇವ್, ಐ. ಎಸ್. ಜೋಹರ್ [ದಿನ 3 ಪ್ರದರ್ಶನ]

ಆಪೇರ— 10–5–68 ರಿಂದ

.... ಅಸೋಸಿಯೇಟೆಡ್ ಕನ್ನಡ ಚಿತ್ರ ....

ಬೆಂಗಳೂರು ಮೇಲ್

ಪಾತ್ರೆ: ರಾಜಕುಮಾರ್ ನರಸಿಂಹರಾಜು — ಕೊಟ್ಟಾರಕರ್
ಅಶ್ವಥ್ ಜಯಂತಿ ವಿಜಯಲಲಿತ

Help The Gorakshana

ಗೋರಕ್ಷಣಕ್ಕೆ ಬೆಂಬಲ ನೀಡಿ

— ಗೋರಕ್ಷಣಾ ವ್ಯವಸ್ಥಾಪಕರ ವಿನಂತಿ —

ಗೋರಕ್ಷಣಾಕ್ಕೆ ಲೇಖನಗಳನ್ನೂ ಪ್ರೋತ್ಸಾಹಧನವನ್ನೂ
ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು

ಹಂದಾಪಾಯಿದೆ ಕಳೆದಿಂವಸರು ಇವ ಳ್ಳ ಚಂದಾ ಸಾವತಿಮಾಡಬೇಕಾಗಿ ವಿನಂತಿ

ಡಾ|| ಪಿ ಎಸ್ ನಾರಾಯಣ್, ಶ್ರೀ ಪಿಎಸ ವಿಶ್ವನಾಥ್ ಜಹುನಗರ, ಬೆಂಗಳೂರು
ಶ್ರೀ ಬಿ ಜಿ. ಶಾಸ್ತ್ರಿಗಳು, 1030 ವಿದ್ಯಾರಣ್ಯಪುರ, ಮೈಸೂರು
ಶ್ರೀ ಅನಂತನಂಸಿಂಹಯ್ಯಂಗಾರ್, ಶಾಸ್ತ್ರಿಧರ್ಮಪ್ರಚಾರಸಭಾ ಹೊಂಗನೂರು
ಗೋರಕ್ಷಣಾ ಆಫೀಸು ಸತ್ಯವಾದಿ ಪ್ರೆಸ್ ಚಾಮರಾಜಪುರಂ ಮೈಸೂರು 4

ವಿಳಾಸ — ಗೋರಕ್ಷಣ ಆಫೀಸು 1067 ಚಾಮರಾಜಪುರಂ, ಮೈಸೂರು

Golden Jubilee of 'Satyavadi'

The golden jubilee of the ' Satyavadi ' is to be celebrated very soon.

The President, the Prime Minister, H H. the Maharaja of Mysore, and other personages have extended messages of felicitations and good wishes. Sri Sringeri and Sri Dwaraka Jagadgurujis have favoured blessings and financial aid.

It is welknown that golden jubilee of newspapers in India is rare and almost unknown in Mysore state. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited with grateful thanks.

Editor, ' Satyavadi ' Chamarajapuram, Mysore 4.

Edited, Printed & Published by Dharmapracara Nirata M S Krishna Rao (Proprietor) at the Satyavadi Press Chamarajapuram, Mysoe 4